**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ**

**ಸಿ.ಸಿ.ನಂ. 1200/2023**

ಸಾಕ್ಷಿಯ ಹೆಸರು : ಪ್ರತಾಪ್ ಸಿಡಬ್ಲ್ಯೂ - 10

ತಂದೆಯ ಹೆಸರು : ತಿಮ್ಮರಾಜು ಪಿಡಬ್ಲ್ಯೂ - 2

ವಯಸ್ಸು : 33 ವರ್ಷ

ಉದ್ಯೋಗ : ಖಾಸಗಿ ಉದ್ಯೋಗ,

ವಾಸ ಸ್ಥಳ : **ತರೀಕೆರೆ**

**ದಿನಾಂಕ: 12-02-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ಸ. ಸ. ಅ. ರವರಿಂದ:-**

ಚಾ.ಸಾ-1 ಮತ್ತು 4 ಇವರ ಪರಿಚಯ ಇದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ದಿ:27-11-2022 ರ ಅಮಾನತ್ತು ಪಂಚನಾಮೆಯ ಮೇಲೆ ನನ್ನ ಸಹಿ ಇದೆ ಎಂದು ಹೇಳುತ್ತಾರೆ, ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದೆ, ಸಹಿಯನ್ನು ನಿ.ಪಿ-2(ಬಿ ) ಎಂದು ಗುರುತಿಸಲಾಯಿತು. ನಿ.ಪಿ-2 ಕ್ಕೆ ತರೀಕೆರೆ ಪೊಲೀಸ್ ಠಾಣೆಯಲ್ಲಿ ವಾಹನ ಅಮಾನತ್ತು ಪಡಿಸಿಕೊಳ್ಳುವ ಕಾಲಕ್ಕೆ ಮಾಡಿದ್ದೇನೆ. ಈಗ ತೋರಿಸುತ್ತಿರುವ ಪೋಟೋಗಳಲ್ಲಿ ನಾನು ಇದ್ದೇನೆ, ಅದನ್ನು ಈಗಾಗಲೇ ನಿ.ಪಿ- 4 ಎಂದು ಗುರುತಿಸಲಾಯಿತು. ಸ್ಥಳದಿಂದ ಒಂದು ಕೆ.ಎಸ್.ಆರ್.ಟಿ.ಸಿ ಬಸ್ಸು ಮತ್ತು ದ್ವಿಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಳ್ಳಲಾಗಿದೆ. ಬಹಳ ದಿನಗಳು ಆಗಿರುವ ಕಾರಣ ನನಗೆ ನೆನಪಿಲ್ಲ. ನಿ.ಪಿ-4 ರಲ್ಲಿ ಕಾಣಿಸುವ ವಾಹನಗಳನ್ನೇ ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರವರಿಂದ:-**

ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ನಿ.ಪಿ-2 ನ್ನು ನನ್ನ ಮುಂದೆ ಬರೆದಿಲ್ಲ, ಅದನ್ನು ಆಗಲೇ ಬರೆಯಲಾಗಿತ್ತು. ಪೋಟೊ ತೆಗೆಸಿಕೊಂಡ ನಂತರ ಸಹಿ ಪಡೆದುಕೊಂಡರು. ಪೊಲೀಸರ ಕೋರಿಕೆ ಮೇರೆಗೆ ನಾನು ಸಹಿ ಮಾತ್ರ ಮಾಡಿದ್ದೇನೆ ಎಂದರೆ ಸರಿ, ಚಾ,ಸಾ-1 ಕೂಡ ನನಗೆ ಪರಿಚಯ ವ್ಯಕ್ತಿ ಇರುವ ಕಾರಣ ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನಾನು ನಿ.ಪಿ -2 ನ್ನು ಓದಿಲ್ಲ ಎಂದರೆ ಸರಿ.

ಮರುವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

*ಓ ಹೇ ಕೇ ಸ ಇ ಎ ಒ*

**Sd/-**

*ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ*

***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***